ಸಾಮಾನ್ಯವಾಗಿ ಜಾಹೀರಾತಿನಿಂದ ಲಭ್ಯವಾದ ಪ್ರಯೋಜನವು ಜಾಹೀರಾತಿನ ವೆಚ್ಚಕ್ಕೆ ಲಾಭದಾಯಕವಾಗಿರುತ್ತದೆ.

ಆ) ದೂರದರ್ಶನದಲ್ಲಿ ಪ್ರತಿವಾರ ಪ್ರಚಾರವಾಗುವ ''ಅಮುಲ್ ಸುರಭಿ'' ಕಾರ್ಯಕ್ರಮದಲ್ಲಿ ನಿಗಮವು ಬಟ್ಟೆ ರೂಪದಲ್ಲಿ ಬಹುಮಾನ ನೀಡಿ ಜಾಹೀರಾತು ನೀಡುತ್ತಿದ್ದು, ''ಪ್ರಿಯದರ್ಶಿನಿ'' ಹೆಸರನ್ನು ಜನಪ್ರಿಯಗೊಳಿಸುವುದು ಇದರ ಉದ್ದೇಶವಾಗಿರುತ್ತದೆ.

ಇ) 58 ಮಾರಾಟ ಮಳಿಗೆಗಳ ಪೈಕಿ, 1995-96ರಲ್ಲಿ 47 ಮಾರಾಟ ಮಳಿಗೆಗಳು ನಷ್ಟದಲ್ಲಿ ನಡೆಯುತ್ತಿದೆಯೆಂದು ಗುರುತಿಸಲಾಗಿತ್ತು. ನೇಕಾರರು ಉತ್ಪಾದಿಸಿದ ಬಟ್ಟೆಗಳನ್ನು ಈ ಮಳಿಗೆಗಳ ಮೂಲಕ ಮಾರಾಟ ಮಾಡುತ್ತಿದ್ದು, ಉತ್ತಮಗೊಳಿಸಲು ಒತ್ತು ನೀಡಲಾಗಿದೆ ಮಳಿಗೆಗಳನ್ನು ಮುಚ್ಚುವುದರಿಂದ ಮೇಲ್ವೆಚ್ಚ (ಓವರ್ ಹೆಡ್ಸ್) ಹೆಚ್ಚಾಗುವುದು.

ವಿಷಯ: ಸಮಾಜ ಕಲ್ಯಾಣ ಇಲಾಖೆಯಲ್ಲಿ ಜೇಷ್ಠತಾ ಆಧಾರದ ಮೇಲೆ ಬಡ್ತಿ

2552 (3222)

ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಹಾಲಿ ಇರುವ ಉಪ ನಿರ್ದೇಶಕರ ಸಂಖ್ಯೆ ಎಷ್ಟು; ಆ ಪೈಕಿ ಖಾಲಿ ಇರುವ ಸ್ಥಾನಗಳ ಸಂಖ್ಯೆ ಎಷ್ಟು?

ಆ) ಎಷ್ಟು ಮಂದಿಗೆ ಜೇಷ್ಠತೆ ಆಧಾರದ ಮೇಲೆ ಬಡ್ತಿ ನೀಡಲಾಗಿದೆ;

ಇ) ಜೇಷ್ಠತಾ ಪಟ್ಟಿಯನ್ನು ಸಕ್ರಮ ಗೊಳಿಸುವಂತೆ ಮಾಡಲಾದ ಮನವಿಗಳು ಪುರಸ್ಕೃತಗೊಂಡಿವೆಯೇ?

ಈ) ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿ ಕಚೇರಿಗಳನ್ನು ಎಂದು ಸೃಜಿಸಲಾಯಿತು?

ಉ) ಸೃಜಿಸಿದ ನಂತರ ಆಡಳಿತ ಹಿತದೃಷ್ಟಿಯಿಂದ ಹೆಚ್ಚಿಸಲಾದ ಹುದ್ದೆಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಎಂ.ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು):

ಆ) ಇಲಾಖೆಯಲ್ಲಿ 11 ಉಪ ನಿರ್ದೇಶಕರ ಹುದ್ದೆಗಳಿದ್ದು ಇವುಗಳಲ್ಲಿ 3 ಉಪ

ನಿರ್ದೇಶಕರ ಹುದ್ದೆಗಳು ಖಾಲಿ ಇವೆ.

ಆ) ಹೌದು, 11 ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ: ಸಹಾಯಕ ನಿರ್ದೇಶಕರಿಗೆ ಉಪ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಲಾಗಿದೆ.

ಇ) ಹೌದು, ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಕಕಾ 395 ಎಸ್‌ಇಟಿ 88, ದಿನಾಂಕ: 22-4-95ರಲ್ಲಿ ಸರ್ಕಾರವು ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿದೆ.

ಈ) ಕೆಳಕಂಡ ಆದೇಶಗಳಲ್ಲಿ ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳ ಕಚೇರಿಗಳನ್ನು ಮಂಜೂರು ಮಾಡಲಾಗಿದೆ.

1) ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯುಎಲ್ 338:ಎಸ್‌ಇಟಿ82, ದಿನಾಂಕ: 10-3-87, 35 ಕಚೇರಿಗಳು

2) ಸರ್ಕಾರದ ಆದೇಶ ಸಂಖ್ಯೆ ಸಕಕಾ 60 ಎಸ್‌ಇಟಿ 92, ದಿನಾಂಕ: 18-3-94, 07 ಕಚೇರಿಗಳು

3) ಸರ್ಕಾರದ ಆದೇಶ ಸಂಖ್ಯೆ ಸಕಕಾ 202 ಪಕಸೆ 95, ದಿನಾಂಕ: 13-3-96 100 ಕಚೇರಿಗಳು.

ಉ) 1) ಪ್ರಥಮ ದರ್ಜೆ ಸಹಾಯಕರು-ಗ್ರೂಪ್ 'ಸಿ' 142 ಹುದ್ದೆಗಳು

2) ದ್ವಿತೀಯ ದರ್ಜೆ ಸಹಾಯಕರು-ಗ್ರೂಪ್ 'ಸಿ' 142 ಹುದ್ದೆಗಳು

3) ಬೆರಳಚ್ಚುಗಾರರು -ಗ್ರೂಪ್ 'ಸಿ' 142 ಹುದ್ದೆಗಳು

ವಿಷಯ: ಸಣ್ಣ ಕೈಗಾರಿಕೆಗಳಿಗೆ ಸಹಾಯಧನ

2555 (3223)

ಶ್ರೀ ಡಿ.ಆರ್.ಪಾಟೀಲ್ (ಗದಗ್): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ರಾಜ್ಯದಾದ್ಯಂತ ಸಣ್ಣ ಕೈಗಾರಿಕೆಗಳಿಗೆ ವಿತರಣೆಯಾಗದಿರುವ ಸಹಯಧನದ ಮೊತ್ತ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) 1995-96 ಹಾಗೂ 1996-97ನೇ ಸಾಲಿನಲ್ಲಿ ಸಣ್ಣ ಕೈಗಾರಿಕೆಗಳಿಗೆ ಮಂಜೂರಾದ ಸಹಾಯಧನ ಎಷ್ಟು? ಇದರಲ್ಲಿ ವಿತರಣೆಯಾಗಿರುವ ಮೊತ್ತ ಎಷ್ಟು? ಎಷ್ಟು ಕೈಗಾರಿಕೆಗಳಿಗೆ ಇದು ವಿತರಣೆಯಾಗಿದೆ?